**ದಿನಾಂಕಃ07-01-2020 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 2(ಎ) ಪರ ಶ್ರೀ.ಹೆಚ್.ಟಿ., ವಕೀಲರಿಂದಃ**

ನಿಪಿ-1 ಕರಾರು ಪತ್ರವನ್ನು ಪ್ರಸನ್ನ ಎಂಬುವವರು ಬೆರಳಚ್ಚು ಮಾಡಿರುತ್ತಾರೆ. ಸದರಿ ಪತ್ರಕ್ಕೆ ಪ್ರಸನ್ನ ಎಂಬುವವರು ಸಹಿ ಮಾಡಿರುವುದಿಲ್ಲ. ನಿಪಿ-1 ಕ್ಕೆ ಪ್ರತಿವಾದಿಗಳು ಹಾಕಿರುವ ಸಹಿಯನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಜೆರಾಕ್ಸ್ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಮೊದಲು ಅದರಲ್ಲಿರುವ ಸಹಿ ಲಕ್ಷ್ಮಿ ಎಂಬುವವರದ್ದು ಎಂದು ನುಡಿದಿದ್ದು ನಂತರ ಅವರ ಸಹಿ ಅಲ್ಲ ಎಂದು ನುಡಿದಿರುತ್ತಾರೆ. ನಾನು ಪ್ರತಿವಾದಿಗಳಿಗೆ 3 ಲಕ್ಷ ರೂಗಳನ್ನು ದಾವಾ ಆಸ್ತಿಯನ್ನು ಖರೀದಿಮಾಡಲು ಕೊಟ್ಟಿಲ್ಲ ಸಾಲದ ರೂಪದಲ್ಲಿ ಪ್ರತಿವಾದಿಗಳಿಗೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ಪ್ರತಿವಾದಿಗಳು ನಿಪಿ-1 ಕರಾರುಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸುಲೋಚನ ಎಂಬುವವರು 1 ಮತ್ತು 2 ನೇ ಪ್ರತಿವಾದಿಯ ಮಗಳು ಎಂದರೆ ಸರಿ. 3 ರಿಂದ 5 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಯ ಮೇಲೆ ಹಕ್ಕು ಇದೆಯೋ ಇಲ್ಲವೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹಕ್ಕು ಇದೆ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯ ಮಗಳಾದ ಸುಲೋಚನರವರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇದೆಯೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಸುಲೋಚನರವರು ಸದರಿ ನೊಂದಣಿ ಕ್ರಯಪತ್ರಕ್ಕೆ ಸಹಿಮಾಡುತ್ತಾರೆ ಎಂದು 1 ನೇ ಪ್ರತಿವಾದಿ ಹೇಳಿದ್ದರು ಎಂದು ನುಡಿಯುತ್ತಾರೆ.

ನಾನು ಪ್ರತಿವಾದಿಗಳಿಗೆ 3 ಲಕ್ಷ ರೂ.ಗಳನ್ನು ಸಾಲವಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ 3 ಲಕ್ಷ ರೂ.ಗಳ ಬಾಬ್ತು ಪ್ರತಿವಾದಿಗಳಿಂದ ಪಾಮಿಸರಿ ನೋಟ್ ಬರೆಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಸದರಿ ಪ್ರಾಮಿಸರಿ ನೋಟ್ ನ ಮೂಲಪ್ರತಿಯನ್ನು ನಾನೇ ಇಟ್ಟುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಸಾಲವಾಗಿ ಹಣ

ಕೊಟ್ಟಿಲ್ಲ ಮತ್ತು ಯಾವುದೇ ಪ್ರಮಿಸರಿ ನೋಟ್ ಬರೆದುಕೊಟ್ಟಿಲ್ಲ ಮತ್ತು  ನನ್ನ ಮತ್ತು ಪ್ರತಿವಾದಿಗಳ ನಡುವೆ ಕ್ರಯದ ಕರಾರುಪತ್ರವಾಗಿದ್ದು ಆ ಬಾಬ್ತು ಹಣ ನೀಡಿದ್ದೇನೆಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ನಾನು ಸಾಲಕೊಟ್ಟಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಹಣವನ್ನು ಈಗಲೂ ಹಿಂದಿರುಗಿಸಲೂ ಸಿದ್ದರಿದ್ದಾರೆ ಎಂದರೆ ಸಾಕ್ಷಿಯು ನನಗೆ ಮನೆ ಇಲ್ಲ ಆದ್ದರಿಂದ ನನಗೆ ಮನೆಬೇಕು ಎಂದು ನುಡಿಯುತ್ತಾರೆ. ನಿಪಿ-1 ನ್ನು ಸಾಲದ ಭದ್ರತೆಗಾಗಿ ಪ್ರತಿವಾದಿಗಳು ಮಾಡಿಕೊಟ್ಟಿರುವ ಕಾರಣದಿಂದ ದಾವಾ ಆಸ್ತಿಯ ಕ್ರಯಪತ್ರ ಮಾಡಿಕೊಡಲು ಪ್ರತಿವಾದಿಗಳು ಬಾಧ್ಯಸ್ತರಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.